# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1019 |
| ಸದಸ್ಯರ ಹೆಸರು | : | ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 29.09.2020 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಎಷ್ಟು ಟನ್ ಕಸ ಉತ್ಪತ್ತಿಯಾಗುತ್ತದೆ; (ವಿವರ ನೀಡುವುದು) | ಪ್ರತಿನಿತ್ಯ ಅಂದಾಜು 160 ರಿಂದ 163 ಟನ್ ಕಸ ಉತ್ಪತ್ತಿಯಾಗುತ್ತದೆ. ಸದರಿ ತ್ಯಾಜ್ಯವನ್ನು ಪ್ರತಿನಿತ್ಯ ದ್ವಿತೀಯ ಹಂತವಾಗಿ ಪಾಲಿಕೆಯ ವಾಹನಗಳಿಂದ 125 ರಿಂದ 130 ಟನ್ ತ್ಯಾಜ್ಯವನ್ನು ಸಂಸ್ಕರಣಾ ಘಟಕಕ್ಕೆ ಸಾಗಿಸಲಾಗುತ್ತಿದೆ. |
| ಆ) | ಕಸ ವಿಲೇವಾರಿ ಮಾಡಲು ಪಾಲಿಕೆಯ ಆಡಳಿತ ಕೈಗೊಂಡಿರುವ ಕ್ರಮವೇನು; | ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಅನುಪಿನಕಟ್ಟೆ ಗ್ರಾಮದಲ್ಲಿ 27 ಎಕರೆ ಸಂಸ್ಕರಣಾ ಘಟಕ ಹೊಂದಿದ್ದು, ಸದರಿ ಘಟಕವನ್ನು ನಿರ್ವಹಣೆ ಮಾಡಲು ಮೇ\|\| ರಾಮ್ಕಿ ಎನ್ವಿರೋ ಇಂಜಿನೀಯರ್ಸ್ ಲಿಮಿಟೆಡ್, ಹೈದ್ರಾಬಾದ್ ಇವರಿಗೆ 2008 ರಿಂದ 20 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.<br><br>ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್ಲಾ 35 ವಾರ್ಡ್‌ಗಳಲ್ಲಿನ ಮನೆ-ಮನೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳನ್ನು (Pignature) ಹಂದಿ ಸಾಕುವವರಿಂದ 41 ಪ್ಯಾಕೇಜ್‌ಗಳಲ್ಲಿ ನಿರ್ವಹಿಸಲಾಗುತ್ತಿದೆ. ಪ್ರಸ್ತುತ ನಗರದಲ್ಲಿ 85,833 ಮನೆಗಳಿದ್ದು ಸದರಿ ಗುತ್ತಿಗೆದಾರರು 65,000 ಮನೆಗಳಿಂದ ಕಸ ಸಂಗ್ರಹಣೆ ಮಾಡುತ್ತಿದ್ದು, ಉಳಿದ ಮನೆಗಳಿಂದ ಪಾಲಿಕೆಯ ವಾಹನಗಳಿಂದ ಕಸ ಸಂಗ್ರಹಣೆ ಮಾಡಲಾಗುತ್ತಿದೆ. ಸದರಿ ಸಂಗ್ರಹಿಸಿದ ತ್ಯಾಜ್ಯವನ್ನು ಅದೇ ದಿನ ತ್ಯಾಜ್ಯವನ್ನು ವಿಲೇವಾರಿ ಘಟಕಕ್ಕೆ ಸಾಗಿಸಲಾಗುತ್ತಿದೆ ಹಾಗೂ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಂಡ್ರೋ ಕಾಂಪೋಸ್ಟಿಂಗ್ ಮಾದರಿಯಲ್ಲಿ ಸಂಸ್ಕರಿಸಿ ಉಳಿದ ನಿಸತ್ವಗಳನ್ನು ವೈಜ್ಞಾನಿಕವಾಗಿ ನೆಲಭರ್ತಿ ಮಾಡಲಾಗುತ್ತಿದೆ |

ಇ) ಕಳೆದ 3 ವರ್ಷಗಳಿಂದ ಶಿವಮೊಗ್ಗ ಮಹಾನಗರ ಪಾಲಿಕೆಯಿಂದ ಕಸ ನಿರ್ವಹಣೆಗೆ ಖರ್ಚು ಮಾಡಿದ ಹಣವೆಷ್ಟು? (ವರ್ಷವಾರು ಮಾಹಿತಿ ನೀಡುವುದು)

| Particulars | 2017-18 | 2018-19 | 2019-20 |
|---|---|---|---|
| ಖಾಯಂ ಪೌರಕಾರ್ಮಿಕರ ವೇತನ | 5,95,00,000 | 6,68,72,000 | 7,21,00,000 |
| ಕಸ ಸಂಗ್ರಹಣೆ ಘಂಟೆಗಾಡಿ | 2,27,80,000 | 1,68,96,000 | 1,32,03,000 |
| ಪೌರಕಾರ್ಮಿಕರಿಗೆ ಸಾಧನ ಮತ್ತು ಸಲಕರಣೆಗಳು | 30,93,000 | 00,000 | 17,16,500 |
| ಇಂಧನ (ಘನತ್ಯಾಜ್ಯ ವಸ್ತು ವಿಲೇವಾರಿ ವಾಹನಗಳಿಗೆ) | 1,30,84,000 | 1,43,89,000 | 1,67,66,000 |
| ಘನತ್ಯಾಜ್ಯ ನಿರ್ವಹಣೆಗಳ ವಾಹನಗಳ ರಿಪೇರಿ | 30,84,000 | 44,27,000 | 47,20,300 |
| ಘನತ್ಯಾಜ್ಯ ವಾಹನಗಳ ವಿಮೆ | 14,48,000 | 14,56,000 | 15,07,272 |
| ಘನತ್ಯಾಜ್ಯ ವಸ್ತು ಮತ್ತು ವಿಲೇವಾರಿ (ಡಂಪಿಂಗ್ ಮತ್ತು ಟಿಪ್ಪಿಂಗ್ ಶುಲ್ಕ) | 95,50,000 | 1,01,67,000 | 88,10,000 |
| ಘನತ್ಯಾಜ್ಯ ಹೊರಗುತ್ತಿಗೆದಾರರ ಪೌರಕಾರ್ಮಿಕರ ವೇತನ | 5,70,03,000 | 5,54,69,000 | 4,53,59,000 |
| ಘನತ್ಯಾಜ್ಯ ಹೊರಗುತ್ತಿಗೆದಾರ ಚಾಲಕರು ಮತ್ತು ಲೋಡರ್ಸ್‌ಗಳ ವೇತನ | 3,25,33,000 | 2,50,71,000 | 2,28,81,000 |

ಕಡತ ಸಂಖ್ಯೆ: ನಅಇ 25 ಶಿಮಪಾ 2020(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು